**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ ಸಿ ಸಂಃ 636-2019**

| | | |
|---|---|---|
| ಸಾಕ್ಷಿಯ ಹೆಸರುಃ | ಚಿಕ್ಕಸ್ವಾಮಿ | ಪ್ರಾ.ಸಾಃಃ 01 |
| ತಂದೆ/ಗಂಡನ ಹೆಸರುಃ | ಮರಿಚೆನ್ನೆಗೌಡ | ಚಾಸಾಃಃ 01 |
| ವಯಸ್ಸುಃ | ವರ್ಷ 38 | ಪ್ರಮಾಣೀಕರಿಸಿದ ದಿಃ 04.02.2020. |
| ಉದ್ಯೋಗಃ | **ಪೊಲೀಸ್ ಇನ್ಸ್ಪೆಕ್ಟರ್, ಸಿ.ಐ.ಡಿ. ಬೆಂಗಳೂರು** ಪೊಲೀಸ್ ಠಾಣಾ | |
| ವಾಸ ಸ್ಥಳಃ | ಬೆಂಗಳೂರು | |

**ಮುಖ್ಯ ವಿಚಾರಣೆಃ ಹಿಸಸಅ ರಿಂದಃ**

ನಾನು 27.05.2016 ರಿಂದ 10.09.2018 ವರೆಗೆ ಪಿ.ಎಸ್.ಐ. ಆಗಿ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 03.10.2016 ರಂದು ಸಮಯ ಸುಮಾರು ರಾತ್ರಿ 11 ಗಂಟೆಗೆ ನಾನು, ಚಾಸಾ-4 ಮತ್ತು 05 ರವರು ಇಲಾಖಾ ವಾಹನದಲ್ಲಿ ಗಸ್ತಿನಲ್ಲಿರುವಾಗ ನನಗೆ ಬಂದ ಖಚಿತ ಮಾಹಿತಿಯ ಮೇರೆಗೆ ಚಪ್ಪರದಹಳ್ಳಿಯ ಬಾರ್ ನಿಂದ ಗೊರಹಳ್ಳಿ ಗ್ರಾಮದ ಕಡೆಗೆ ಒಬ್ಬ ವ್ಯಕ್ತಿ ಅಕ್ರಮವಾಗಿ ಒಂದು ಬೈಕ್ ನ ಪೆಟ್ರೋಲ್ ಟ್ಯಾಂಕ್ ನ ಮೇಲೆ ಎರಡು ರಟ್ಟಿನ ಬಾಕ್ಸ್ ನಲ್ಲಿ ಮದ್ಯ ತುಂಬಿದ ಟೆಟ್ರ ಪ್ಯಾಕೆಟ್ಗಳನ್ನು ಇಟ್ಟುಕೊಂಡು ಮಾರಾಟ ಮಾಡಲು ತಯಾರಿ ನಡೆಸುತ್ತಿದ್ದ ಸಲುವಾಗಿ ಸಾಗಾಣೆ ಮಾಡಲು ಸಜ್ಜಾಗುತ್ತಿದ್ದಾಗ ಅವರ ಮೇಲೆ ದಾಳಿ ಮಾಡುವಂತೆ ಕೋರಿರುತ್ತಾರೆ. ನಾನು, ಚಾಸಾ-04 ರಿಂದ ಚಾಸಾ-06, ಚಾಸಾ-02 ಹಾಗೂ ಚಾಸಾ-03 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು, ದಾಳಿಯ ವಿಷಯ ತಿಳಿಸಿ ಅವರು ಒಪ್ಪಿದ ಮೇರೆಗೆ, ಸದರಿ ಸ್ಥಳಕ್ಕೆ ಇಲಾಖಾ ವಾಹನದಲ್ಲಿ ಗೊರಹಳ್ಳಿ ಚಪ್ಪರದ ಹಳ್ಳಿ ಮಧ್ಯದ ಕಾಡಬಸವೇಶ್ವರ ಮುಂಭಾಗದ ರಸ್ತೆಯ ಬಳಿಯಲ್ಲಿ ಜೀಪನ್ನು ನಿಲ್ಲಿಸಿ ಕಾಯುತ್ತಿರುವಾಗ ಬೆಳಿಗ್ಗೆ 2.45 ಗಂಟೆಗೆ ಸುಮಾರು ಒಂದು ಬೈಕ್ ನಲ್ಲಿ ಒಬ್ಬ ವ್ಯಕ್ತಿ ಬೈಕ್ನ ಪೆಟ್ರೋಲ್ ಟ್ಯಾಂಕ್ ನ ಮೇಲೆ ಎರಡು ರಟ್ಟಿನ ಬಾಕ್ಸ್ ನಲ್ಲಿ ಮದ್ಯ ತುಂಬಿದ ಟೆಟ್ರ ಪ್ಯಾಕೆಟ್ಗಳನ್ನು ಇಟ್ಟುಕೊಂಡು ಬರುತ್ತಿರುತ್ತಾನೆ. ನಂತರ ಆತನನ್ನು ವಿಚಾರಿಸಿದಾಗ ಆತನ ಬಳಿ ಮದ್ಯ ಇರುವುದಾಗಿ ತಿಳಿಸಿದ್ದು, ಮದ್ಯವನ್ನು ಮಾರಾಟ ಮಾಡಲು ಯಾವುದೇ ರಹದ್ದಾರಿ ಇರುವುದಿಲ್ಲ ಎಂದು ತಿಳಿಸಿರುತ್ತಾನೆ.

ನಂತರ ಆತನ ಹೆಸರು ವಿಳಾಸವನ್ನು ತಿಳಿದುಕೊಂಡು, ಆತನ ಬಳಿ ಇದ್ದ ಮದ್ಯ ತುಂಬಿದ ರಟ್ಟು ಚೀಲವನ್ನು ತೆಗೆದು ನೋಡಲಾಗಿ ಅದರಲ್ಲಿ 90 ಎಂ ಎಲ್ ನ 96 ಮದ್ಯ ತುಂಬಿದ ಓರಿಜಿನಲ್ ಚಾಯ್ಸ್

ಟೆಟ್ರಾ ಪ್ಯಾಕೆಟುಗಳಿದ್ದು, ಇನ್ನೊಂದು ಬಾಕ್ಸ್ ನಲ್ಲಿ 180 ಎಂ ಎಲ್ ನ 8 ಪಿ.ಎಂ.ನ ರೆಡ್ ವಿಸ್ಕಿಯ 14 ಪೌಚ್ಗಳಿದ್ದು, ಮದ್ಯ ತುಂಬಿದ ಓರಿಜಿನಲ್ ಚಾಯ್ಸ್ ಟೆಟ್ರಾ ಪ್ಯಾಕೆಟುಗಳಿದ್ದು ಅವುಗಳನ್ನು ಪಂಚರರ ಸಮಕ್ಷಮ ವಶಕ್ಕೆ ಪಡೆದು, ಅವೆಲ್ಲವುಗಳನ್ನು ವಶಕ್ಕೆ ಪಡೆದು, ಸದರಿ ಓರಿಜಿನಲ್ ಚಾಯ್ಸ್ ಟೆಟ್ರಾ ಪ್ಯಾಕೆಟ್ಗಳಿಂದ 02 ಪ್ಯಾಕೆಟ್ಟನ್ನು ಹಾಗೂ 180 ಎಂ ಎಲ್ ನ 8 ಪಿ.ಎಂ.ನ ರೆಡ್ ವಿಸ್ಕಿಯ 01 ಪ್ಯಾಕೆಟ್ಟಗಳನ್ನು ಎಫ್.ಎಸ್.ಎಲ್ ವರದಿಗಾಗಿ ವಶಪಡಿಸಿಕೊಂಡು, ಬಿಳಿಯ ಬಟ್ಟೆಯಿಂದ ಸುತ್ತಿ, ನಂತರ 2.45 ರಿಂದ 4 ರವರೆಗೆ ಮಹಜರ್ ಕ್ರಮವನ್ನು ನಾನು ಮತ್ತು ಚಾಸಾ-02 ರಿಂದ ಚಾಸಾ-06 ರವರ ಸಮಕ್ಷಮ ಜೀಪಿನ ಲೈಟ್‌ನ ಸಹಾಯದಿಂದ ಹಾಗೂ torch ಲೈಟ್ ನ ಸಹಾಯದಿಂದ ಜರುಗಿಸಿ, ಅರಗು ಹಚ್ಚಿ ಪಿ ಎಂಬ ಅಕ್ಷರದಿಂದ ಮೊಹರು ಹಾಕಿ, ಅದಕ್ಕೆ ನಾನು ಮತ್ತು ಚಾಸಾ-02 ರಿಂದ ಚಾಸಾ-06 ಸಹಿ ಹಾಕಿರುತ್ತೇವೆ. ಆರೋಪಿಯ ಬಳಿ ಇದ್ದ ಬೈಕ್ಕ ಕೆಎ-13 ಆರ್ 19167 ರ ಟಿವಿಎಸ್ ಸ್ಟಾರ್ ಸಿಟಿ ಮೋಟಾರ್ ಸೈಕಲ್ ಎಂದು ತಿಳಿದು ಬಂದಿರುತ್ತದೆ. ಹಾಗೂ ಸದರಿ ಮದ್ಯ ಮಾರಾಟ ಮಾಡಿ ಬಂದ 1,300/- ರೂ. ಗಳನ್ನು ಸಹ ವಶಕ್ಕೆಪಡೆದುಕೊಂಡಿರುತ್ತೇವೆ. ನಂತರ ಆರೋಪಿ, ಬೈಕ್ ಮತ್ತು ಮುದ್ದೆ ಮಾಲುಗಳೊಂದಿಗೆ ಠಾಣೆಗೆ 4.45 ಗಂಟೆಗೆ ಬಂದು, ಚಾಸಾ-11 ರವರ ಸಮಕ್ಷಮ ಆರೋಪಿಯ ವಿರುದ್ಧ ಕಾನೂನು ಕ್ರಮ ಜರುಗಿಸಲು ವರದಿ ನೀಡಿರುತ್ತೇನೆ. ಮುಂದಿನ ಕ್ರಮಕ್ಕಾಗಿ ಚಾಸಾ-11 ರವರಿಗೆ ಹಾಜರುಪಡಿಸಿರುತ್ತಾರೆ.

ಸದರಿ ಮಹಜರನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 01 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ.ಪಿ.01(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 02 ಎಂದು, ಅದರಲ್ಲಿರು ಸಾಕ್ಷಿ ಸಹಿಯನ್ನು ನಿ.ಪಿ. 02(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ಈ ದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ.

ಆರೋಪಿಯಿಂದ ವಶಕ್ಕೆಪಡೆದುಕೊಂಡ ಬೈಕ್, ನಗದು ಹಣ ಹಾಗೂ ಟೆಟ್ರಾಪ್ಯಾಕೆಟ್ಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಮುದ್ದೆ ಮಾಲುಗಳು ನ್ಯಾಯಾಲಯದಲ್ಲಿ ಇರದೇ ಇರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

**<u>ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>**

<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>

**ಹೆ:ಸಿ.ನ್ಯಾ. ಹಾಗೂ ಪ್ರ.ವ.ನ್ಯಾ.ದಂ.**
**ಪಿರಿಯಾಪಟ್ಟಣ.**